# ಶ್ರುತಿ ಏರಿಳಿತ

ನಟಿ ಶ್ರುತಿ ಹಾಸನ್ ವೃತ್ತಿ ಬದುಕಿನ ಗ್ರಾಫ್ ಆಗೀಗ ಏರಿಳಿತ ಕಾಣುತ್ತಲೇ ಇದೆ. ಗಾಯಕಿಯೂ ಆದ ಈ ನಟಿಗೆ 'ಸಲಾರ್' ತೆಲುಗು ಸಿನಿಮಾ ಯಶಸ್ಸು ಇನ್ನೊಂದು ಲೈಫ್ ಲೈನ್ ಆದದ್ದು ನಿಜ. ಆ ಸಿನಿಮಾ ಗೆದ್ದಮೇಲೆ 'ವಾಲ್ಟೈರ್ ವೀರಯ್ಯ', 'ಡಕಾಯಿತ್' ಸಿನಿಮಾಗಳಲ್ಲಿ ಅವರಿಗೆ ಅವಕಾಶ ಹುಡುಕಿಕೊಂಡು ಬಂತು. ಈಗ ಚಿತ್ರದ ನಾಯಕ ಅಡಿವಿ ಶೇಷ್ ಜೊತೆಗಿನ ಭಿನ್ನಾಭಿಪ್ರಾಯದಿಂದ 'ಡಕಾಯಿತ್' ಸಿನಿಮಾದಿಂದ ಶ್ರುತಿ ಹೊರಬಂದದ್ದೂ ಆಯಿತು.

'ಸಲಾರ್' ಸಿನಿಮಾದ ಎರಡನೇ ಭಾಗ ಸದ್ಯಕ್ಕೆ ಬರುವುದಿಲ್ಲ. ಹೀಗಾಗಿ ಆ ಅವಕಾಶವೂ ಇಲ್ಲವಾಯಿತು. 'ಕೂಲಿ' ಎಂಬ ತಮಿಳು ಚಿತ್ರವು ಅವರ ಕೈಲಿ ಇದೆ. 'ಶೌರ್ಯಾಂಗ ಪರ್ವಂ' ಎಂಬ ಇನ್ನೊಂದು ತೆಲುಗು ಚಿತ್ರವೂ ಸಾಕಾರಗೊಳ್ಳಬೇಕಿದೆ. ಅದಲ್ಲದೆ ತಮಿಳು – ಇಂಗ್ಲಿಷ್ ಭಾಷೆಯಲ್ಲಿ ತಯಾರಾಗುವ 'ಚೆನ್ನೈ ಸ್ಟೋರಿ' ಎಂಬ ಪ್ರಾಜೆಕ್ಟ್‌ಗೂ ಅವರು ಸಹಿ ಹಾಕಿದ್ದಾರೆ.

ಮೂವತ್ತೆಂಟು ವಯಸ್ಸಿನ ಈ ನಟಿಗೆ ಈಗಲೂ ಬೇಡಿಕೆಯಂತೂ ಇದ್ದೇ ಇದೆ. ತಾವು ಮಾತ್ರ ತಮ್ಮತನದ ವಿಷಯದಲ್ಲಿ ರಾಜೀ ಆಗುವುದಿಲ್ಲ ಎನ್ನುವ ಶ್ರುತಿ, ನಿಷ್ಠುರ ಆದಾಗ ಕೆಲವು ಪ್ರಾಜೆಕ್ಟ್‌ಗಳು ಕೈ ತಪ್ಪುವುದು ಸಹಜ ಎಂದೂ ಹೇಳುತ್ತಾರೆ. ■



# ಆಮೀರ್ ಖಾನ್ ಜೀವನ ದರ್ಶನ



'ಲಾಲ್ ಸಿಂಗ್ ಛಡ್ಡ' ಸಿನಿಮಾ ವೈಫಲ್ಯದ ನಂತರ ನಟ ಅಮೀರ್ ಖಾನ್ ಚಿತ್ರರಂಗದಿಂದ ವಿರಾಮ ಪಡೆದುಕೊಂಡಿದ್ದು ಗೊತ್ತೇ ಇದೆ. ಸಿನಿಮಾದಿಂದ ದೂರ ಉಳಿಯಬೇಕು ಎಂದು ಅವರು ನಿರ್ಧಾರ ಮಾಡಿದ್ದು ಆ ಚಿತ್ರ ಬಿಡುಗಡೆಯಾದ ನಂತರ ಅಲ್ಲ ಅನ್ನುವ ಇನ್ನೊಂದು ಸತ್ಯವನ್ನು ಅವರು ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿಕೊಂಡರು. ಅಮೀರ್ ಚಿತ್ರರಂಗಕ್ಕೆ ಸಹಾಯಕ ನಿರ್ದೇಶಕನಾಗಿ ಪ್ರವೇಶ ಮಾಡಿದ್ದು ತಮ್ಮ 18ನೇ ವಯಸ್ಸಿನಲ್ಲಿ. ಆನಂತರದ 35 ವರ್ಷ ಅವರು ಸಿನಿಮಾ ಹೊರತುಪಡಿಸಿ ಬೇರೆ ಏನನ್ನೂ ಮಾಡಿಲ್ಲ. ಅಭಿನಯ ಅಷ್ಟೇ ಅಲ್ಲದೆ ನಿರ್ಮಾಣಕ್ಕೂ ಕೈ ಹಾಕಿ, ಅವರು ಪ್ರಯೋಗಮುಖಿ ಆದರು. ಹೀಗಿದ್ದೂ ಅವರನ್ನು ಕೋವಿಡ್ ಸಂದರ್ಭದಲ್ಲಿ ಒಂದು ಸಂಗತಿ ಗಾಢವಾಗಿ ಕಾಡಿತು.

'ಅದೊಂದು ದಿನ ಕೆಲಸವನ್ನೇ ಮಾಡದೆ ಸುಮ್ಮನೆ ಕುಳಿತು ಯೋಚಿಸಿದೆ. ಕೋವಿಡ್ ಸಂದರ್ಭದಲ್ಲಿ ಇನ್ನೆಂಥ ಕೆಲಸ... ಸದ್ಯ. ಆದರೆ, ಆಗ ನನಗೆ ನಾನು ನಡೆದುಬಂದ ಹಾದಿಯ ಅಷ್ಟೂ ಹೆಜ್ಜೆಗುರುತುಗಳು ಕಾಣಿಸಿದವು. ನಾನು ಬರೀ ಸಿನಿಮಾ ಎಂದೇ ಜೀವಿಸಿದೆ. ಎಲ್ಲವನ್ನೂ ಅದಕ್ಕೇ ಅರ್ಪಿಸಿಬಿಟ್ಟೆ. ಸೋದರಿಯರ ಜೊತೆ ಸರಿಯಾಗಿ ಸಮಯ ಕಳೆಯಲಿಲ್ಲ. ಪತ್ನಿ ಕಿರಣ್ ರಾವ್‌ಗೆ ಕೊಟ್ಟ ಸಮಯವೂ ಕಡಿಮೆ. ಅದಕ್ಕೂ ಮೊದಲು ಮದುವೆಯಾಗಿದ್ದ ರೀನಾ ಕೂಡ ನನ್ನ ಜೊತೆ ಹೆಚ್ಚು ಕಾಲ ಕಳೆಯಲು ಆಗಲೇ ಇಲ್ಲ. ಕೇವಲ ಸಿನಿಮಾ ಅಂದುಕೊಂಡೇ ಬದುಕಿನ ಉದ್ದಕ್ಕೂ ನಡೆದುಬಂದ ನನಗೆ ಇನ್ನಾದರೂ ಕುಟುಂಬದವರಿಗೆ ಸಮಯ ಕೊಡಬೇಕು ಎನಿಸಿತು. ಆಗಲೇ ಸಿನಿಮಾದಿಂದ ವಿರಾಮ ಪಡೆಯಬೇಕು ಎಂದು ಯೋಚಿಸಿದೆ' ಎಂದು ಅಮೀರ್ ಹೇಳಿಕೊಂಡರು.

ಅಮೀರ್ ಈ ತೀರ್ಮಾನ ಸರಿಯಲ್ಲ ಎಂದು ಮನದಟ್ಟು ಮಾಡಿಸಿದ್ದು ಅವರ ಮಗ ಜುನೈದ್. ಆನಂತರ ಅವರು 'ಲಾಪತಾ ಲೇಡೀಸ್' ಸಿನಿಮಾ ನಿರ್ಮಾಣದಲ್ಲಿ ತೊಡಗಿದರು. ಈಗ 'ತಾರೆ ಜಮೀನ್ ಪರ್' ಚಿತ್ರದಲ್ಲಿ ಅಭಿನಯಿಸಿದ್ದೂ ಆಗಿದೆ. ಆರ್. ಎಸ್. ಪ್ರಸನ್ನ ನಿರ್ದೇಶನದ ಈ ಚಿತ್ರ 'ತಾರೆ ಜಮೀನ್ ಪರ್' ಚಿತ್ರಕ್ಕಿಂತ ಭಿನ್ನವಾಗಿರಲಿದೆ ಎಂದು ಅಮೀರ್ ಹೇಳಿದ್ದಾರೆ. ಕ್ರೀಡಾ ಡ್ರಾಮಾ ಒಳಗೊಂಡ ಈ ಸಿನಿಮಾ ಮೇಲೆ ಅವರು ಮತ್ತೆ ಭರವಸೆ ಇಟ್ಟುಕೊಂಡಿದ್ದಾರೆ. 59 ವರ್ಷ ವಯಸ್ಸಿನ ಅವರನ್ನು ಈಗಲೂ ಪರ್ಫೆಕ್ಷನಿಸ್ಟ್ ಎಂದೇ ಅಭಿಮಾನಿಗಳು ಹೊಗಳುತ್ತಾರೆ. ■